ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 91-97
©*IIMRD*, Mysuru
IIMRD JOURNALS
www.iimrd.com

# ವಿ.ಸೀತಾರಾಮಯ್ಯನವರ ಬದುಕು–ಬರಹ

**ವೆಂಕೋಬರಾವ್.ಎಂ**[1]

**ಪೀಠಿಕೆ**

*ತತ್ವದ ಸಿದ್ಧಿಯ ಕಾಲಕೆ ಕಾದರೆ*
*ಯುಗಯುಗಗಳು ಸಾಕಾದಾವೇ?*
*ಸಖ್ಯಕೆ ಸಹನೆಗೆ ಕರುಣೆಗೆ ಒಲವಿಗೆ*
*ಗಡಿನುಡಿ ಅಡ್ಡಿಯ ತಂದಾವೆ?*

ವಿ.ಸೀ. ರವರು ದೀಮಂತ ವಿದ್ವಾಂಸರು, ಉತ್ತಮ ವಾಗ್ಮಿಗಳು, ಕವಿ, ವಿಮರ್ಶಕರು, ಉದಾರಿಗಳು, ಕವಿಯಾಗಿ ಮಾಡಿರುವ ಕೃಷಿ ಮತ್ತು ವಿಮರ್ಶಕರಾಗಿ ನೀಡಿರುವ ದೃಷ್ಟಿ ಅನಂತವಾದುದು. ಆಧುನಿಕ ಕನ್ನಡ ಸಾಹಿತ್ಯದ ಸೊಬಗನ್ನು ಹೆಚ್ಚಿಸಿದ ಕನ್ನಡ ಲೇಖಕರಲ್ಲಿ ವಿ.ಸೀತಾರಾಮಯ್ಯ ಅವರು ಒಬ್ಬರು. ಸುಮಾರು ಒಂದು ನೂರು ಗ್ರಂಥಗಳನ್ನು, ನೂರಾರು ವಿದ್ವತ್‌ಪೂರ್ಣ, ವಿಚಾರಪೂರ್ಣ ಲೇಖನಗಳನ್ನು ಕನ್ನಡಕ್ಕೆ ನೀಡಿರುವ ಬಹುಮುಖ ಪ್ರತಿಭೆ, ವಿ.ಸೀ ಅವರು ಕನ್ನಡ ಜನತೆಯ ಅತ್ಯಪೂರ್ವ ಪ್ರತಿನಿಧಿಯಾಗಿ ಮೆರೆದು ಮರೆಯಾಗಿದ್ದಾರೆ. ಕಥೆ, ಕಾದಂಬರಿ, ಕಾವ್ಯ, ಲಲಿತ ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ಮಕ್ಕಳ ಸಾಹಿತ್ಯ, ಸಂಶೋಧನೆ ಗ್ರಂಥ ಸಂಪಾದನೆ, ಕಾವ್ಯ–ಮಿಮಾಂಸೆ, ಛಂದಸ್ಸು, ವ್ಯಾಕರಣ ಹೀಗೆ ಎಲ್ಲಾ ಪ್ರಕಾರಗಳಲ್ಲೂ ಗಮನಾರ್ಹ ಕೃತಿಗಳನ್ನು ರಚಿಸಿದ್ದಾರೆ. ಇದರೊಂದಿಗೆ ಉತ್ತಮ ಚಿತ್ರಕಾರರು, ಮೃದಂಗವಾದಕರೂ ಆಗಿದ್ದರು. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿ ಸಂಶೋಧನಾ ಕೇಂದ್ರವನ್ನಾಗಿ ಮಾಡಿದ ಸಂಘಟಕರೂ, ಕನ್ನಡ ನಾಡು ನುಡಿಯ ಹೋರಾಟಗಾರರು ಆಗಿದ್ದರು. ಕನ್ನಡ ಪ್ರಾಧ್ಯಾಪಕರಾಗಿ ತಮ್ಮ ಇಡೀ ಜೀವನವನ್ನು ಕಳೆದ ಇವರದ್ದು ಮರೆಯಲಾಗದ ವ್ಯಕ್ತಿತ್ವ, ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಕನ್ನಡ ಪ್ರಾಧ್ಯಾಪಕರಾಗಿ ತಮ್ಮ ಜೀವನವನ್ನು ಕಳೆದ ಕನ್ನಡದ ಮೊದಲ ಕವಿ.

ವಿ.ಸೀ. ರವರ ಜೀವನ ಮತ್ತು ಸಾಧನೆಯನ್ನು ಗಮನಿಸಿದಾಗ ಅವರು ಅಕ್ಟೋಬರ್ 2, 1899 ರಂದು, ಬೆಂಗಳೂರಿನ ಬೂದಿಗೆರೆ ಎಂಬಲ್ಲಿ ಜನನ ಪಡೆದರು. ಪ್ರಾರ್ಥಮಿಕ ಮತ್ತು

[1] *ಕನ್ನಡ ಸಂಶೋಧನಾರ್ಥಿ, ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಬೆಂಗಳೂರು.*

ಪ್ರೌಢಶಾಲಾ ಶಿಕ್ಷಣವನ್ನು ಪೂರೈಸಿದ್ದು ಬೆಂಗಳೂರಿನಲ್ಲಿ. ಮೈಸೂರಿನ ಕಾಲೇಜಿನಲ್ಲಿ ಓದುತ್ತಿರುವಾಗಲೇ ಶಾರದ ವಿಲಾಸ ಪ್ರೌಢಶಾಲೆಯಲ್ಲಿ ಅವರು ಕೆಲಸ ಮಾಡಿದರು. ಓದು ಮುಗಿದ ಮೇಲೆ 1922 ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳಿನವರೆಗೆ ಮುಂಬೈನಲ್ಲಿ ವ್ಯಾಸಂಗ ಮಾಡುತ್ತಾ. ಡೆಪ್ಯೂಟಿ ಕಂಟ್ರೋಲರ್ ಆಫ್ ಕರೆನ್ಸಿ ಕಛೇರಿಯಲ್ಲಿ ನೌಕರಿ ಮಾಡಿದರು. 1923ರಲ್ಲಿ ಮೈಸೂರಿಗೆ ಹಿಂದಿರುಗಿ 1928ರ ವರೆಗೆ ಮತ್ತೆ ಶಾರದ ವಿಲಾಸ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಮುಂದುವರೆದರು. 1928ರ ಹೊತ್ತಿಗೆ ಮೈಸೂರು ವಿಶ್ವ ವಿದ್ಯಾಲಯದಲ್ಲಿ ಕನ್ನಡ ಬೋಧನೆಯ ಕ್ರಮವನ್ನು ಆಧುನಿಕಗೊಳಿಸುವ ಒಂದು ಹೊಸ ಯೋಜನೆ ರೂಪುಗೊಂಡಿತು. ಆಗ ವಿ.ಸೀ. ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ. ಕನ್ನಡ ತರಗತಿಗಳನ್ನು ಪ್ರಾರಂಭಿಸಿದ್ದು ಈಗಲೇ ಎಂಬುದನ್ನು ನಾವು ಇಲ್ಲಿ ನೆನೆಯ ಬಹುದು.

1928 ರಿಂದ 1955 ರವರೆಗೆ ಅವರು ಬೆಂಗಳೂರು ಮೈಸೂರು ಚಿಕ್ಕಮಗಳೂರುಗಳ ಕಾಲೇಜುಗಳಲ್ಲಿ ಸೇವೆಸಲ್ಲಿಸಿದರು. 1950 ರಿಂದ 1955ರ ವರೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡಿದ ವೀ.ಸಿ. ತಮ್ಮ ಸೇವೆಯ ಕಡೆಯ ದಿನದ ತನಕ ಪಾಠ ಮಾಡುತ್ತಲೇ ನಿವೃತ್ತರಾದುದು ಅತ್ಯುನ್ನತವಾದ ಸಾಧನೆಯಾಗಿದೆ. ಏಕೆಂದರೆ ಇದು ಕೇವಲ ಜೀವನೋಪಾಯವಾಗಿರದೇ ಜೀವನದ ಧ್ಯೇಯವೂ ಆಗಿತ್ತು. ತಾವೇ ಹಿರಿಯ ಉಪಾಧ್ಯಾಯರಾಗಿದ್ದರೂ ಕೂಡ ತಮ್ಮ ಗುರುಗಳಾದ ಡಾ. ಸಿ.ಆರ್.ರೆಡ್ಡಿ, ಡಾ. ರಾಧಾಕೃಷ್ಣನ್, ಪ್ರೊ.ಎನ್.ಎಸ್. ಸುಬ್ಬರಾವ್, ಬಿ.ಎಂ.ಶ್ರೀ., ಹಿರಿಯಣ್ಣ ಮುಂತಾದ ಮಹಾನಿಯರನ್ನು ಸ್ಮರಿಸದ ದಿನವಿಲ್ಲ ಮತ್ತು ಹಿರಿಯ ಮಿತ್ರರಾದ ಎಂ.ಆರ್. ಶ್ರೀನಿವಾಸ್‌ಮೂರ್ತಿ, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯ ಅಂಥವರೊಂದಿಗೆ ಕೆಲಸ ಮಾಡುವುದು ಪುಣ್ಯವೆಂದುಕೊಂಡಿದ್ದರು. ಅವರ ವಿದ್ಯಾರ್ಥಿಗಳಲ್ಲಿ ಕೆಲವರು ಆಗ್ಗಾಗ್ಗೆ ಮನೆಗೂ ಬಂದೂ ಪಠ್ಯ ವಿಷಯಗಳಲ್ಲಿನ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ ಹಸಿರು ಮರದ ನೆರಳಿನಲ್ಲಿ ಕೂಡ ಪಾಠ ಪ್ರವಚನ ನಡೆಯುತಿತ್ತು.

ಹಿಂದಿನ ಕಾಲದ ಗುರು–ಶಿಷ್ಯ ಸಂಬಂಧವನ್ನಿಲ್ಲಿ ಕಾಣಬಹುದು. ವಿ.ಸೀ. ಅವರು ಇಂಗ್ಲೀಷಿನ ಕವನವನ್ನಾಗಲಿ, ಕನ್ನಡದ್ದನ್ನಾಗಲಿ ತರಗತಿಯಲ್ಲಿ ಓದಿದ ಅಪೂರ್ವ ದಾಟಿಯನ್ನು ಅವರ ವಿದ್ಯಾರ್ಥಿಗಳು ಇನ್ನೂ ನೆನೆಯುತ್ತಾರೆ. ಅದೊಂದು ವಿಶೇಷ ರೀತಿಯ ಗಮಕ ಕಲೆ, ಆಳವಾದ ಅರಿವಿನಿಂದಲೂ, ಆತ್ಮೀಯತೆಯಿಂದಲೂ ಅದು ಅವರಿಗೆ ಸಿದ್ಧಿಸಿದೆ. ಕಾಲೇಜಿನಲ್ಲಿ ಶಿಸ್ತನ್ನು ಕಟ್ಟುನಿಟ್ಟಾಗಿ ವಿಧಿಸುತ್ತಿದ್ದ ಈ ಅಧ್ಯಾಪಕರು ಆವರಣವನ್ನು ಬಿಟ್ಟೊಡನೆಯೇ ಎಷ್ಟು ಸುಲಭವಾಗಿ ಬಿಡುತ್ತಿದ್ದರೆನ್ನುವುದು ಅವರ ವಿದ್ಯಾರ್ಥಿಗಳಿಗೆ ಸುಪರಿಚಿತ. ವಿಶ್ವವಿದ್ಯಾನಿಲಯದಲ್ಲಿ ಕನ್ನಡ

ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ ಕರ್ನಾಟಕ ಸಂಘಗಳೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಅವುಗಳ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುವಂತೆ ವಿದ್ಯಾರ್ಥಿಗಳಿಗೆ ಉತ್ತೇಜನ ಲಭಿಸುವಂತೆ ನೋಡಿಕೊಂಡರು. ಅವರ ಕವನ ಸಂಕಲನವೊಂದನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಕೇಳಿಕೊಂಡರೂ ತಾವೂ ಅದರ ಕಾರ್ಯ ನಿರ್ವಾಹಕ ಮಂಡಳಿಯಲ್ಲಿರುವ ತನಕ ವಿ.ಸೀ. ಅದಕ್ಕೆ ಒಪ್ಪಲಿಲ್ಲ. ಅವರು ನಿವೃತ್ತರಾದ ಮೇಲೆ ಆ ಬಯಕೆ ಸಂದಿತು. ಇಂಥ ವಿಚಾರಗಳಲ್ಲಿ ಅವರು, ಎಷ್ಟು ಸೂಕ್ಷ್ಮವಾಗಿದ್ದರು ಎಂಬುದಕ್ಕೆ ಇದೊಂದು ನಿದರ್ಶನ. ಇವೆಲ್ಲ ಈ ಕನ್ನಡ ಮಾಸ್ತರರ ವ್ಯಕ್ತಿತ್ವದ ಮೇಲೆ ಬೆಳಕು ಹರಿಸುವ ಸಂಗತಿಗಳು. ಆದರೆ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಗಳಿಸಿದವರೊಬ್ಬರು ತನ್ನ ಕಾಲೇಜುಗಳಲ್ಲಿ 27 ವರ್ಷಗಳ ಕಾಲ ಕನ್ನಡ ಉಪಾಧ್ಯಾಯರಾಗಿ ದುಡಿದು ಎಲ್ಲರ ಪ್ರೀತಿ ಗೌರವವನ್ನು ಗಳಿಸಿದ್ದು ಬಹುಶಃ ವಿಶ್ವವಿದ್ಯಾನಿಲಯದ ಇತಿಹಾಸದಲ್ಲೇ ಒಂದು ವಿಶೇಷ ಸಂಗತಿ ಎನ್ನಬಹುದು.

ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೇ ಸಂಗೀತ ಮತ್ತು ಭಾಷಣ ಕಲೆಯಲ್ಲಿ ವಿ.ಸೀ ಅವರು ಪಾರಂಗತರಾಗಿದ್ದರು. ವಿ.ಸೀತಾರಾಮಯ್ಯ ಅವರಿಗೆ ಸಂಗೀತ ಎಷ್ಟು ಪ್ರಿಯವಾಗಿತ್ತೆಂಬುದನ್ನು ಅವರ ಗೀತೆಗಳಿಂದ ತಿಳಿಯಬಹುದು. ಕರ್ನಾಟಕ ಸಂಗೀತವನ್ನು ಕಲಿಯುವ ಅಭಿಲಾಷೆ, ಅವರಿಗೆ ಚಿಕ್ಕಂದಿನಿಂದಲೇ ಅಂಕುರಿಸಿತ್ತು. ಮಹಾವಿದ್ವಾಂಸರಾದ ವಾಸುದೇವಚಾರ್ಯರಲ್ಲಿ ಕೆಲವು ತಿಂಗಳು ಶಿಷ್ಯ ವೃತ್ತಿ ಮಾಡಿದ್ದ ವಿ.ಸೀ ರವರು ಭೈರವಿ ವರ್ಣದ ಕಲಿಕೆಯೊಂದಿಗೆ ಅದನ್ನು ಮುಗಿಸಿದರು. ಶೇಷಣ್ಣನವರ ವೀಣೆ, ಬಿಡಾರಾಂ ಕೃಷ್ಣಪ್ಪನವರ ಹಾಡುಗಾರಿಕೆ, ವರದಾಚಾರ್ಯರು ಹಾಡುತ್ತಿದ್ದ ಕಂದಕಗಳು ಇನ್ನೂ ಅವರ ಕಿವಿಯಲ್ಲಿ ಮುಳುಗುತ್ತಲೇ ಇವೆ. ಅದೇ ಅಭಿಮಾನದಿಂದ ಇವರು ಹಿಂದುಸ್ತಾನಿ ಗಾಯನವನ್ನು ಪಾಶ್ಚಾತ್ಯರ ಸಿಂಫೋನಿಗಳನ್ನು ಕೇಳಬಲ್ಲರು. ಅವರಿಗೆ ಚಿತ್ರಕಲೆಯಲ್ಲಿ ಎಷ್ಟು ಆಳವಾದ ಆಸಕ್ತಿ ಇದೆ ಎನ್ನುವುದಕ್ಕೆ ಅವರು ವೆಂಕಟಪ್ಪನವರ ಮೇಲೆ ಇಂಗ್ಲೀಷಿನಲ್ಲಿ ಬರೆದಿರುವ ಕಿರುಹೊತ್ತಿಗೆ ಸಾಕ್ಷಿ. ವಿ.ಸೀ. ಅವರು ಶ್ರೇಷ್ಠ ಭಾಷಣಕಾರರು, ವಿಶ್ವವಿದ್ಯಾನಿಲಯದ ಪ್ರಾಚಾರೋಪನ್ಯಾಸ ಮಾಲೆಯಲ್ಲಿ, ಆಕಾಶವಾಣಿಯಲ್ಲಿ ಮತ್ತು ಇತರ ಸಂಘ ಸಂಸ್ಥೆಗಳಲ್ಲಿ ಅವರು ಅನೇಕ ಭಾಷಣಗಳನ್ನು ಮಾಡಿದ್ದಾರೆ. ಬರೆದು ತಂದು ಭಾಷಣ ಮಾಡುವುದು ಅವರ ರೂಢಿಯಲ್ಲಿತ್ತು ಸ್ವಾತಂತ್ರ್ಯ ಪೂರ್ವಕಾಲದಲ್ಲೂ ಆ ಬಳಿಕವೂ ಅವರು ನಾಡಿನಾದ್ಯಂತ ಹಲವು ಬಾರಿ ಸುತ್ತಿ ಸುಳಿದು ಸಾಹಿತ್ಯ, ಸಂಸ್ಕೃತಿ, ಅರ್ಥಶಾಸ್ತ್ರ, ರಾಜಕೀಯ ಮುಂತಾದ ವಿಷಯಗಳ ಬಗ್ಗೆ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ನಿರಾರ್ಗಳವಾಗಿ ಭಾಷಣ ಮಾಡುತ್ತಿದ್ದರು. ಅವರು ಭಾಷಣವನ್ನು ಪ್ರಾರಂಭಿಸಿದರೆ ಸಭೆ ಶಾಂತವಾಗಿ ಕುಳಿತು ಕಿವಿಗೊಟ್ಟು ಕೇಳುತಿತ್ತು. ಸಭಿಕರನ್ನು ಸೆಳೆದಿಡುವ ಅಂಥಹ ಶಕ್ತಿ ವಿ.ಸೀಯವರಲ್ಲಿತ್ತು. ಬೇರೆಯವರ ಭಾಷಣಕ್ಕೆ ಅಧ್ಯಕ್ಷರಾಗಿ ಹೋದಾಗ ವಿ.ಸೀ ಅವರು ನಡೆದುಕೊಳ್ಳುವ ರೀತಿಯೇ ಗಮನಾರ್ಹ. ಭಾಷಣಕಾರ ಹೇಳಿದರಲ್ಲಿ ಇರಬಹುದಾದ ಗುಣಗಳನ್ನು

ಮಾತ್ರ ಎತ್ತಿಕೊಂಡು ವಿವರಿಸಿ, ಆ ಭಾಷಣಕಾರನು ಮೆಚ್ಚಿಕೊಳ್ಳಬೇಕು ಎನ್ನುವ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು.

ಸಾಹಿತ್ಯ ವಿಮರ್ಶೆಯ ಬಗೆಗೆ ವಿ.ಸೀ.ಯವರ ಚಿಂತನೆಗಳು ಇಂದಿಗೂ ಮೌಲ್ಯದಾಯಕವಾಗಿದೆ. ವಿ.ಸೀಯವರು 26 ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ವಿಮರ್ಶೆ, ನಾಟಕ, ಹರಟೆ, ಕವಿತೆ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಚಿತ್ರಕಲೆ, ಪ್ರವಾಸ ಕಥನಗಳು ಸೇರಿವೆ. ಇವುಗಳೆಲ್ಲವನ್ನು ಒಳಗೊಳ್ಳುವಂಥ ವಿಮರ್ಶೆಯಾಗಲಿ ಒಂದೊಂದೆ ಕುರಿತ ವಿಸ್ತಾರ ವಿಮರ್ಶೆಯಾಗಲಿ ಇಲ್ಲಿನ ಗುರಿಯಲ್ಲ. ತತ್ವಾಪ್ತಿಶಾಸ್ತ್ರಗ್ರಂಥಗಳ ಬಗೆಗೆ ನನಗೆ ಅಧಿಕಾರವಿಲ್ಲ. ಅದು ಆಯಾ ಕ್ಷೇತ್ರಗಳ ವಿದ್ವಾಂಸರಿಗೆ ಸೇರಿದ್ದು, ಇದು ಬಹುಮಟ್ಟಿಗೆ ವ್ಯಕ್ತಿಪರಿಚಯ. ವಿ.ಸೀ. ಅವರ ವಿಮರ್ಶೆಯ ಕ್ಷೇತ್ರ ವಿಶಾಲವಾದುದ್ದು. ಅದು ಪಂಪನನ್ನು ಮೆರೆಸುತ್ತದೆ. ಭಾರತದಲ್ಲಿ ಶ್ರೀ ಕೃಷ್ಣ ಹೇಗೆ ರೂಪುಗೊಂಡಿದ್ದಾನೆಂಬುದನ್ನು ಚಿತ್ರಿಸುತ್ತದೆ.

ಅಲ್ಲಮ ಪ್ರಭುವನ್ನು ಮೆಚ್ಚಿಕೊಂಡು ಇಂಥ ಮಹನೀಯರು ಹುಟ್ಟಿ ಆ ರೀತಿ ಬಾಳಿದ್ದರಿಂದಲೇ ನಮ್ಮ ಸಂಸ್ಕೃತಿಗೆ ದೊಡ್ಡತನ ಬಂದಿರುವುದು ಎಂದು ಸಾರುತ್ತದೆ. ಉದ್ದೇಶಗಳನ್ನಳಿಸಿ ಶಾಂತಿ, ಸಂತೋಷ, ಧೈರ್ಯ ತರುವ ದಾಸರ ಪದಗಳನ್ನು ಆಪ್ತತೆ ಸಹಜತೆ ಭಾವ ಬಂಧುರತೆ ಭವ್ಯಗಳಿಂದ ಬೆಳಗುವ ವಚನಗಳನ್ನು ಸ್ವಾಗತಿಸುತ್ತದೆ. ಜನಪದ ಗೀತೆಗಳಲ್ಲಿ ತ್ರಿಪದಿಗಳಲ್ಲಿ ಮತ್ತು ರಾತ್ರಿಯ ಹೊತ್ತು ಬೀದಿ ಕವಳದವರು ದನಿಯೆತ್ತುವ "ಹಾಲು ಅನ್ನದ ಬುತ್ತಿ, ಕೈಲಿ ಚಿನ್ನದ ಕತ್ತಿ" ಎಂಬಂಥ ಕನ್ನಡದ ಹಾಡುಗಳಲ್ಲಿ ಇರುವ ಲೋಕಾನುಭವದ ಕಾವ್ಯವನ್ನು ಮೆಚ್ಚಿ "ಇವೆಲ್ಲ ಈಗೆಲ್ಲಿ ಹೋದವೆಂದು"ಕೊಳ್ಳುತ್ತದೆ. ಅನೇಕ ಕೃತಿಗಳ ಪರಿಚಯ ಅದಕ್ಕಿದೆ. ವಿ.ಸೀ ಅವರು ಅಭಿಪ್ರಾಯ ಪಡುವಂತೆ, ವಿಮರ್ಶಕರು ಸರ್ವಜ್ಞರಂತೆ ನುಡಿಯ ಬೇಕಿಲ್ಲ. ಅವರಿಗೆ ಎಲ್ಲದರ, ಎಲ್ಲ ಬಗೆಯ ಪರಿಚಿತೆಯೂ ಇದೆಯೆಂಬುದನ್ನು ಯಾರು ಪ್ರಶಸ್ತಿ ಕೊಟ್ಟಿದ್ದಾರೆ? ಎಂಬ ಎಚ್ಚರಿಕೆಯ ಮಾತುಗಳು ಎಷ್ಟು ಸಂಯೋಚಿತವಾಗಿದೆ ಇಂದಿಗೆ?.

ಹೊಸ ಕಾಲದ ಕನ್ನಡ ಕೃತಿಗಳನ್ನು ಇವರ ವಿಮರ್ಶೆ ಮುಟ್ಟದೆ ಇಲ್ಲ. ಕೆಲವು ವೇಳೆ ನೇರವಾಗಿ ಕೆಲವು ವೇಳೆ ಪ್ರಾಸಂಗಿಕವಾಗಿ ಇದನ್ನು ಮಾಡಿದೆ. ಆದರೆ ಅವು ಇಲ್ಲಿಲ್ಲಿ ಬಿಡಿ ಲೇಖನಗಳಲ್ಲಿ ಅವಲೋಕನಗಳಲ್ಲಿ ಸೇರಿಕೊಂಡಿವೆ. ಕನ್ನಡ ವಿಮರ್ಶೆಯನ್ನು ಕುರಿತು ವಿ.ಸೀ ಅವರು ಹೀಗೆ ಹೇಳಿದ್ದಾರೆ "ಎಷ್ಟೋ ಮಂದಿ ವಿದ್ವಾಂಸರಲ್ಲಿ ಪುಸ್ತಕ ವಿಮರ್ಶೆಗಳಲ್ಲಿ ಸ್ವಾತಂತ್ರ್ಯ ಮೌಲ್ಯ ನಿರ್ಣಯಗಳಲ್ಲಿ ತೊಡಗಿ ಈ 40 ವರ್ಷಗಳಲ್ಲಿ ಒಳ್ಳೆಯ ವಿಮರ್ಶೆಯನ್ನು ಮಾಡಿದ್ದಾರೆ. ನಯವಾಗಿ, ಮೃದುವಾಗಿ ನುಡಿದಿರುವವರು ಕೆಲವರು. ಒರಟಾಗಿ ಬರ್ಬರವಾಗಿ ಆರ್ಭಟದಿಂದ ನುಡಿದಿರುವವರು ಕೆಲವರು". ಸಹನಶೀಲವಾದ ವಿಮರ್ಶೆಗೆ ಅವರು ಮನ್ನಣೆ, ವಿಮರ್ಶೆ ಒಂದು ಟಾರ್ಚ್‌ಲೈಟಾಗಬೇಕು. ಸಿಕ್ಕಿದ್ದನ್ನೆಲ್ಲಾ ಮಣ್ಣು ಮುಕ್ಕಿಸುವ ಜಡ್ಡಿನ ತೀರ್ಪಾಗಬಾರದು ಎಂದು ವಿ.ಸೀ

ಅವರು ಆಗಾಗ ಹೇಳುತ್ತಿದ್ದ ಮಾತು. ಅಂತರಂಗದ ವಿಶ್ವಾಸ, ಮಾನವೀಯದ ಸೌಹಾರ್ದ, ಸದಭಿರುಚಿಯ ಪರಿಣಾಮ, ಹೀಗಿರುವಾಗ ವಿಮರ್ಶೆಯ ಉಪಯುಕ್ತವಾಗಬಲ್ಲದು ಕವಿಗೆ, ಓದುಗನಿಗೆ, ಮಿಕ್ಕಿದ್ದೆಲ್ಲಾ ಸ್ವಂತ ಕಹಳೆಯ ಓದು ಎಂದಿದ್ದಾರೆ. 'ಕೃತಿಯ ಸ್ವರೂಪಕ್ಕೆ ಹೊಂದುವಂತೆ ಭಾವಿಸದೆ– ಸೌಹಾರ್ದದಿಂದ ಅನುಭವಿಸುತ್ತಿರುವವರಿಗೆ ಯಾವುದೆಲ್ಲ ಹೊಳೆದು ಪ್ರಕಟವಾಗುವುದೋ, ಯುಕ್ತವೆನಿಸುವುದೋ ಅದೆಲ್ಲ ಅರ್ಥಮಂಡಲ – ಅದೆಲ್ಲ ಬೆಲೆಯ ಕಲ್ಪನೆಯೇ ಹೊಂದದ್ದು ಅನುಚಿತ, ವಿರಸ, ಅಸಂಗತ' ಇಂದಿನದು ಕಾವ್ಯಲೋಕಕ್ಕೆ ತಕ್ಕದ್ದು. ಸಾಕಲ್ಯದಿಂದ ವಿಮರ್ಶೆ ಮಾಡಬೇಕಾದರೆ, ಕಾಲಗತಿ ಬೇಕು ಎಂಬ ವಾದ ಪೂರ್ತಿ ತಿಳಿದು ಹಾಕುವಂತಹದ್ದಲ್ಲ. ಆದರೂ ನಮ್ಮಲ್ಲಿ ವಿಮರ್ಶೆ ಬೆಳೆಯಲಿಲ್ಲ. ಪಂಪಯಾತ್ರೆಯ ಓದುಗನಿಗೆ ಯಾತ್ರಿಕನಿಗೆ ಆಗುತ್ತದೆ. ಯಾತ್ರೆ ಮುಗಿಯಿತು ಎಂದು ವಿ.ಸೀ. ತಮ್ಮ ಕಥನವನ್ನು ನಿಲ್ಲಿಸಿದ್ದಾರೆ. ಆ ಮಗುವಿನ ಸೊಗಸೇ ಸೊಗಸು. ಕೃತಕೃತ್ಯತೆಯ ವಿನಮ್ರ ಆತ್ಮವಿಶ್ವಾಸ ಆ ಎರಡು ಪದಗಳಲ್ಲಿ ಮಿನುಗುತ್ತದೆ. ಆ ತೆರನಾದ ಮುಕ್ತಾಯ ಅಪರೂಪ ಈ ಕೃತಿ ಅಲ್ಲಿಗೆ ಮುಗಿಯಿತು. ಆದರೆ ಓದುಗರ ಪ್ರವಾಹ ಮುಗಿಯದು.

ವಿ.ಸೀ ಶ್ರೀಯವರ ಮುಖ್ಯ ಶಿಷ್ಯರಲ್ಲಿ ಒಬ್ಬರು. ಶ್ರೀಯವರ ಪ್ರೇರಕ ಶಕ್ತಿಗೆ ಓಗೊಟ್ಟವರು. ಕನ್ನಡದಂತೆಯೇ ಇಂಗ್ಲೀಷಿನ ಹೃದಯವನ್ನು ಕಂಡುಕೊಂಡವರು. ವಿಶಾಲವೂ ಆದ ಅಧ್ಯಯನವು ರಸಿಕರಾದ ವಿದ್ವನ್ಮಿತ್ರರ ಸ್ನೇಹವೂ ಅವರನ್ನು ಕವಿತೆಗೆ ಸೆಳೆದುದು ಸಹಜವೇ. ಪಂಪಯಾತ್ರೆಯ ಗದ್ಯದಲ್ಲಿಯೇ ಅವರ ಕವಿ ಮನೋಧರ್ಮ ಪ್ರತಿಬಿಂಬಿತವಾಗಿತ್ತು. ಶ್ರೀಯವರ ಮೃದು ಸ್ಪರ್ಶದಿಂದ ಮೊಗ್ಗರಳಿ ಹೂವಾಯಿತು. ವಿ.ಸೀ. ಯವರು ತಮ್ಮ ಮೈಸೂರಿನ ಗಾನವಿಶಾರದ ವೈಣಿಕ ಪ್ರವೀಣರ ಸಂಗೀತ ಶಾಸ್ತ್ರರತ್ನಗಳ ಪರಿಚಯವುಳ್ಳವರು. ಶೇಷಣ್ಣನವರು ವೀಣೆಯನ್ನು ಮಾತನಾಡಿಸುತ್ತಿದ್ದುದನ್ನು ಕೇಳಿದರು. ಹೀಗಾಗಿ ಕವಿತೆಯೊಂದಿಗೆ ಸಂಗೀತವೂ ಸೇರಿಕೊಳ್ಳುವುದು ಅವರಿಗೆ ಪ್ರಿಯವೆನಿಸಿತು. ಅವರ ಮೊದಲ ಕವನ ಸಂಗ್ರಹವಾದ 'ಗೀತಗಳು' ಹೀಗೆ ಹುಟ್ಟಿರಬೇಕೆಂದು ನಂಬಿಕೆ, ಗೀತೆಗಳಾದ ಮೇಲೆ 'ದೀಪಗಳು', 'ನೆಳಲು ಬೆಳಕು', ದ್ರಾಕ್ಷಿದಾಳಿಂಬೆ, ಹೆಜ್ಜೆಪಾಡು ಈ ಅಂಕಿತಗಳು ಕಲಾತ್ಮಕವೂ, ವಿಮರ್ಶಾತ್ಮಕವೂ ಆಗಿದೆ. ಕನ್ನಡ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸಬೇಕೆಂದು ಅವರ ಸಂಕಲ್ಪವೆಂದು ಇಂಥವರೇ ನುಡಿಯುವುದು ಸೋಜಿಗ. ವಿ.ಸೀ. ಹೈಸ್ಕೂಲಿನಲ್ಲಿ ಓದುತಿದ್ದಾಗ ಇಂಗ್ಲೀಷ್ ಉಪಾಧ್ಯಾಯರೊಬ್ಬರು ವಿದ್ಯಾರ್ಥಿಗಳ ಎದುರಿಗೆ ಒಂದು ಗುಲಾಬಿ ಹೂವನ್ನಿಟ್ಟು ಇದರ ವಿಷಯವಾಗಿ ಒಂದು ಪುಟದಷ್ಟು ವರ್ಣನೆಯನ್ನು ಬರೆಯಿರಿ ಎಂದರು. ಅದಕ್ಕೆ ಹಿಂದೆಯೇ ನಾವು ಆನೆಯ ಮೇಲೆ ಕತ್ತೆಯ ಮೇಲೆ ಅಂಥವನ್ನು ಬರೆದಿದ್ದೆವು. ಇದೇನು ಕಷ್ಟ ಎಂದು ಇದಕ್ಕೆ ಕೈ ಹಾಕಿದೆವು. ನಮ್ಮ ಬರಹಗಳನ್ನು ನೋಡಿದ ಮೇಲೆ ಉಪಾಧ್ಯಾಯರು "ಇವುಗಳಲ್ಲಿ ಕೆಲವಾದರೂ ತಪ್ಪಿಲ್ಲದೆ ಸಾಕಷ್ಟು ಚೆಲುವಾಗಿದೆ. ಆದರೆ ಈ ಗುಲಾಬಿ

ಹೂವನ್ನು ನೋಡಿ ಒಂದೂ ಇದರಂತಿಲ್ಲ" ಎಂದರು. ಗುಲಾಬಿ ಹೂವಿನ ಕುರಿತ ಬರಹ ಗುಲಾಬಿ ಹೂವಿನಷ್ಟೇ ಚೆಲುವಾಗುವುದು ಸಾಧ್ಯವಿಲ್ಲ. ವಿ.ಸೀ. ಅವರ ಪಂಪಯಾತ್ರೆಯನ್ನು ಕುರಿತು ವಿಮರ್ಶೆಯ ಪಾಡು ಅಷ್ಟೇ. ಅದು ನಮ್ಮ ರಸಿಕತೆಯ ಓರೆಗಲ್ಲು. ಹಿತ–ಮಿತ ವಚನವೂ, ಪ್ರತಿಭಾಸಂಪನ್ನನೂ ಆದ ತರುಣ ಕವಿ ಕಟ್ಟಿದ ಭಾವಗೀತೆ, ಕನ್ನಡದಲ್ಲಿಯೇ ಮೊತ್ತಮೊದಲು ಯಶಸ್ವಿ ಪ್ರವಾಸ ಕಥನವಾಗಿರುವದಷ್ಟೇ ಅಲ್ಲ. ಅದರ ಬೆಲೆ ಅದರ ಮಟ್ಟಿಗೆ ಓದುಗ ಓದುಗನಾಗಿಯೇ ಉಳಿಯುವುದಿಲ್ಲ. ಕವಿಯೊಂದಿಗೆ ಪ್ರವಾಸ ಮಾಡಿದ ಮಹಾನುಭಾವನೊಂದಿಗೆ ಸೇರಿಕೊಂಡು ಅವರು ನೋಡಿದ ನೋಟ, ಕಂಡ ಕನಸುಗಳಲ್ಲಿ ಭಾಗಿಯಾಗುತ್ತಾನೆ. ಸೌಂದರ್ಯ ಪ್ರೇಕ್ಷಿತನಾದ ಸತ್ಯವನ್ನು ಕಾಣುತ್ತಾನೆ. ಅವರ ಜೊತೆ ಪಂಪಯಾತ್ರೆ ನನ್ನ ಬಾಳಿನ ಭಾಗ್ಯವೆಂದು ನೆನೆಯುತ್ತಾರೆ. ಹನ್ನೆರಡು ವರ್ಷಗಳಿಗೊಮ್ಮೆ ಬಾರಕೂರಿಗೆ ಹಿಂತಿರುಗುವ ಚಿತ್ರ ಪೂರ್ಣ ವೈಭವವನ್ನು ಶ್ರೀನಿವಾಸರು ತಮ್ಮ ಸೋಜಿಗದ ಹೊಳಲಿನಲ್ಲಿ ವರ್ಣಿಸಿದ್ದಾರೆ. ಅದರಂತೆ ಅನುಭವವೇ ಅವರ ಪುಸ್ತಕಗಳಿಗಂತೂ ಹಾಗೆಯೇ ಇವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅವರ ಮನೆ ಮನೆ ತುಂಬಿಸುವ ಹಾಡು ಇಡಿ ನಾಡ ತುಂಬ ಹರಡಿಕೊಂಡು ಅವರಿಗೆ ಕೀರ್ತಿಯನ್ನು ಗಳಿಸಿಕೊಟ್ಟಿದೆ. ಜಾನಪದ ಸಾಹಿತ್ಯದಲ್ಲಿ ಕಂಡುಬರುವ ಭಾವಸಿದ್ಧಿಯನ್ನು ಇದರಲ್ಲಿ ಕಾಣಬಹುದು.

ವಿ.ಸೀ ಅವರು ನಾಲ್ಕು ಸ್ವಂತ ನಾಟಕಗಳನ್ನು ಎರಡು ಇಂಗ್ಲೀಷ್ ನಾಟಕಗಳ ಅನುವಾದಗಳನ್ನು ರಚಿಸಿದ್ದಾರೆ, 'ಸೊಹ್ರಾಬ್–ರುಸ್ತುಂ' ಮ್ಯಾಥ್ಯೂಆರ್ನಾಲ್ಡ್‌ನ ಕವಿತೆಯ ನಾಟಕ ರೂಪ. 'ಆಗ್ರಹ' ಭರತದ ಸೌಪ್ತಿಕಪರ್ವದ ಕಥೆಯ ಅಶ್ವತ್ಥಾಮನನ್ನು ಚಿತ್ರಿಸುವ ರೂಪಕ. 'ಚ್ಯವನ' ಆಧುನಿಕ ಜೀವನ ಸಮಸ್ಯೆಗೆ ಸಂಬಂಧಿಸಿದ ನಾಟಕ. 'ಶ್ರೀಶೈಲ ಶಿಖರ' ಅವರ ಮಿತ್ರರು ಹೇಳಿದ ಕಥೆಯ ರೂಪಾಂತರ. ಒಂದು ಹೆಣ್ಣಿನ ಬಾಳು, ಭಾವನೆಗಳ ಅಂತರವನ್ನು ಚಿತ್ರಿಸುವ ಈ ನಾಟಕ ಮೌಲ್ಯಯುತವಾದುದು. ಅವರ 'ಹಣಪ್ರಪಂಚ' ಕನ್ನಡ ಭಾಷೆಯಲ್ಲಿ ರಚಿತವಾದ ಅತ್ಯಮೂಲ್ಯವಾದ ಶಾಸ್ತ್ರಗ್ರಂಥ. ಹಣಪ್ರಪಂಚವನ್ನು ಓದುವಾಗ ಒಂದು ಕಾದಂಬರಿಯನ್ನು ಓದಿದಂತೆ ವಿಚಾರಗಳು ರಸವತ್ತಾಗಿರುವುದನ್ನು ಕಾಣಬಹುದು. ಅವರು ಕನ್ನಡದಲ್ಲಿ ಪ್ರಯೋಗಿಸಿರುವ ಹೊಸ ಸೃಷ್ಟಿಯಾದ ಪದಪುಂಜಗಳು ಕೂಡ ಚಿರಪರಿಚಿತವಾಗಿರುವುದು ಅರ್ಥಪೂರ್ಣವಾಗಿದೆ. ಸತ್ಯ ಮತ್ತು ಮೌಲ್ಯ ದರ್ಶನಶಾಸ್ತ್ರದ ಪರವಾದ ಗ್ರಂಥ ಇದು ವ್ಯಾಪಕವಾದ ಕ್ಷೇತ್ರವನ್ನೊಳಗೊಂಡಿದೆ. ಮಾನವನ ಮನಸ್ಸು ಎಷ್ಟು ಆಳವಾಗಿ ವಿಚಾರ ಮಾಡಬಹುದು ಎಂಬುದನ್ನು ಈ ಗ್ರಂಥವು ತೋರಿಸುತ್ತದೆ.

*ಇಹದಲಿ ಒಪ್ಪಲು ಆಗದ ಪರವನು*
*ಬಯಕೆಯ ಕರೆವುದೆ ಕೈಚಾಚಿ ?*
*ಬಾಳನು ಶೋಧಿಸಿ ಶುಚಿಯನು ಬೆಳೆದರೆ*
*ಇಹವೇ ಅರಳದೆ ಪರವಾಗಿ ?*

**ಉಪಸಂಹಾರ**

ನಗುಮುಖವನ್ನು ಜಗತ್ತಿಗೆ ತೋರಿಸುತ್ತ, ನಂಬಿಕೆಯಿಂದ ಜೀವನ ನಡೆಸಿದ ವಿ.ಸೀ ರವರು ನೋವನ್ನು ನುಂಗಿಕೊಂಡಿದ್ದರು. ಅವರದು ತುಂಬಿದ ವ್ಯಕ್ತಿತ್ವ, ಸೃಜನಶೀಲತೆ, ಪಾಂಡಿತ್ಯ ಮತ್ತು ಸಮೃದ್ಧ ಪ್ರತಿಭೆಯುಳ್ಳವರು. ಆಳವಾದ ವಿದ್ವತ್ತು, ವಿಶಾಲವಾದ ಹೃದಯವಂತಿಕೆ, ಸ್ನೇಹಮಯವಾದ ವ್ಯಕ್ತಿತ್ವ, ಪ್ರಾಮಾಣಿಕತೆ, ಶ್ರದ್ಧೆ ಮತ್ತು ಆಸಕ್ತಿಗಳಿಂದ ಬಹಳ ಬೇಗ ಎಲ್ಲರಿಗೂ ಆಕರ್ಷಣೆಗೊಳ್ಳುತ್ತಿದ್ದರು. ವಿ.ಸೀ. ಅವರ ಜೀವನ ಸಾಧನೆ ಒಂದು ಬಗೆಯ ಪವಾಡ ಸದೃಶ್ಯವಾದುದು ಮತ್ತು ಅಪರೂಪವಾದದ್ದು, ಅವರು ನಿತ್ಯ ರೋಗಿಗಳಾದರೂ ಅನಾರೋಗ್ಯ ಅವರಿಗೆ ಎಂದು ಶಾಪವಾಗಲಿಲ್ಲ. ಅವರ ಶಿಷ್ಯವಾತ್ಸಲ್ಯ, ಗುರುಗೌರವ ಅಧ್ಯಯನ, ಅಧ್ಯಾಪನ, ಕಲಾಸ್ವಾದನೆಗಳನ್ನು ಮಾಡಿದ ಅವರ ಕಾರ್ಯಗಳೆಲ್ಲವೂ ಅನನ್ಯವಾದವುಗಳು.

**ಪರಾಮರ್ಶನ ಗ್ರಂಥಗಳು**


- ಜೋಷಿ ಪಿ.ವಿ ಮತ್ತು ಇತರರು. (1991). ವಿ.ಸೀ–ವ್ಯಕ್ತಿತ್ವ, ಕಾವ್ಯ ವಿಶಿಷ್ಟ. (ಎರಡನೇ ಮುದ್ರಣ), ಸಂಪದ, ಬೆಂಗಳೂರು.
- ಕಣಜ–ಅಂತರ್ಜಾಲ ಕನ್ನಡ ಜ್ಞಾನಕೋಶ. (ಏಪ್ರೀಲ್ 28, 2011). ವಿ. ಸೀತಾರಾಮಯ್ಯ. ಮಾಹಿತಿಯನ್ನು https://kanaja.karnataka.gov.in/ವಿ.ಸೀತಾರಾಮಯ್ಯ/ ಅಂತರ್ಜಾಲ ಕೊಂಡಿಯಿಂದ ಪಡೆಯಲಾಗಿದೆ.
- ರಾಮಚಂದ್ರ. ಎಂ. (2009). ವಿ ಸೀತಾರಾಮಯ್ಯ (ಜೀವನ ಮತ್ತು ಸಾಧನೆ). ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.
- ಸಿದ್ದಲಿಂಗಯ್ಯ. ಜಿ.ಎಸ್. ಮತ್ತು ಎಂ.ಹೆಚ್ ಕೃಷ್ಣಯ್ಯ. (ಸಂ.). (1990). ಸಾಲುದೀಪಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಶೇಷಗಿರಿರಾವ್ ಎಲ್ ಎಸ್. ಮತ್ತು ಸುಮನ. (1999). ವಿ.ಸೀ. ನೂರರ ನೆನಪು. ವಿ.ಸೀ. ಸಂಸ್ಮರಣ ವೇದಿಕೆ, ಮೈಸೂರು.